

# ಬಾತುಗಳ ಜಲಯೋಗ

ಜಿ.ಆರ್. ಪಂಡಿತ್

**ಸಂಕೀರ್ಣ ವಲಸೆಗೆ ಹೆಸರಾಗಿರುವ ಪಟ್ಟೆ ತಲೆ ಹೆಬ್ಬಾತು ಹಾಗೂ ನಿಪುಣ ಈಜುಗಾರ ಕೆಂಪು ತಲೆ ಬಾತುಕೋಳಿಗಳ ಕುರಿತ ಚಿತ್ರಪಟ ಕಥನ.**

## ಪಟ್ಟೆ ತಲೆ ಹೆಬ್ಬಾತಿನ ಯೋಗಾಸನ!

ಅತಿ ಎತ್ತರದಲ್ಲಿ ಹಾರಾಡುವ ಸಾಮರ್ಥ್ಯ ಹೊಂದಿರುವ ಪಕ್ಷಿ ಎಂದೇ ‘ಪಟ್ಟೆ ತಲೆ ಹೆಬ್ಬಾತು’ ಹೆಸರುವಾಸಿ. ಈ ಹೆಬ್ಬಾತುಗಳು ನದಿಯ ದಡದಲ್ಲಿ ನಿಂತು ಯೋಗಾಸನದ ಭಂಗಿಗಳಲ್ಲಿ ತಮ್ಮ ರೆಕ್ಕೆಗಳನ್ನು ತೆರೆದು ವಿವಿಧ ಮಾದರಿಯಲ್ಲಿ ದೇಹ ಬಳುಕಿಸುತ್ತಿರುವುದನ್ನು ಕಂಡು ಆ ಬಳುಕುಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿದೆ.

ಗಾತ್ರದಲ್ಲಿ 71ರಿಂದ 76 ಸೆಂಟಿ ಮೀಟರ್ ಉದ್ದವಿರಬಹುದಾದ ಈ ಪಕ್ಷಿಯ ರೆಕ್ಕೆ ಸುಮಾರು 140ರಿಂದ 160 ಸೆಂಟಿ ಮೀಟರ್ ಉದ್ದವಿರುತ್ತದೆ. ಬಿಳಿ–ಬೂದು ಮೈಬಣ್ಣ. ಹಳದಿ ಬಣ್ಣದ ಕೊಕ್ಕು ಮತ್ತು ಉದ್ದನೆಯ ಕಾಲುಗಳು. ರೆಕ್ಕೆಗಳ ತುದಿಯಲ್ಲಿ ಕಪ್ಪು ಬಣ್ಣ.

ಬಿಳಿ ತಲೆಯ ಹಿಂಭಾಗದಲ್ಲಿರುವ ಎರಡು ದಪ್ಪನೆಯ ಕಪ್ಪು ಗೆರೆಯಿಂದಾಗಿ ‘ಪಟ್ಟೆ ತಲೆ ಹೆಬ್ಬಾತು’ ಎಂದು ಇದಕ್ಕೆ ಹೆಸರು. ಮಧ್ಯ ಏಷ್ಯಾದ ಎತ್ತರದ ಜೌಗು ಪ್ರದೇಶ ಮತ್ತು ಸರೋವರಗಳಲ್ಲಿ ಈ ಪಕ್ಷಿಗಳು ಹೆಚ್ಚಾಗಿ ವಾಸಿಸುತ್ತವೆ. ಈ ಹೆಬ್ಬಾತುಗಳಿಗೆ ಸಂಬಂಧಿಸಿದ ಅತ್ಯಂತ ಆಶ್ಚರ್ಯಕರ ಸಂಗತಿ, ಅವುಗಳ ವಲಸೆ. ಸಾಮಾನ್ಯವಾಗಿ ಚಳಿಗಾಲದಲ್ಲಿ ಭಾರತ, ಪಾಕಿಸ್ತಾನ, ನೇಪಾಳ ಮತ್ತು ಬಾಂಗ್ಲಾದೇಶಗಳಿಗೆ ಸಾವಿರಾರು ಕಿಲೋಮೀಟರ್ ದೂರದವರೆಗೆ ಅತ್ಯಂತ ಸವಾಲಿನ ವಲಸೆ ಕೈಗೊಳ್ಳುತ್ತವೆ.

ಪಟ್ಟೆ ತಲೆ ಹೆಬ್ಬಾತುಗಳು 7000 ಮೀಟರ್‌ಗಿಂತ ಹೆಚ್ಚು ಎತ್ತರದಲ್ಲಿ ಹಾರಬಲ್ಲವು. ಹಿಮಾಲಯ ಪರ್ವತ ಶ್ರೇಣಿಯ ಮೇಲೆ ಕೂಡ ಅತಿ ಎತ್ತರದಲ್ಲಿ ಹಾರುವ ಸಾಮರ್ಥ್ಯ ಹೊಂದಿವೆ. ಅಷ್ಟೊಂದು ಎತ್ತರದಲ್ಲಿ ಆಮ್ಲಜನಕ ಮಟ್ಟವು ಸಮುದ್ರ ಮಟ್ಟಕ್ಕಿಂತ ಅರ್ಧದಷ್ಟು ಕಡಿಮೆ ಇರುತ್ತದೆ. ಆದಾಗ್ಯೂ ಹೆಬ್ಬಾತು ಸಲೀಸಾಗಿ ಹಾರಾಟ ನಡೆಸುತ್ತದೆ.

ಗಾಳಿಯ ಪ್ರಮಾಣ ಕಡಿಮೆಯಾಗಿದ್ದಾಗಲೂ ಹೆಚ್ಚಿನ ಆಮ್ಲಜನಕವನ್ನು ಹೊರತೆಗೆಯಬಲ್ಲ ಸಾಮರ್ಥ್ಯ ಅವುಗಳ ದೇಹಕ್ಕಿದೆ. ಅವುಗಳ ದೊಡ್ಡ ಶ್ವಾಸಕೋಶಗಳು ಮತ್ತು ಗಾಳಿಯ ಚೀಲಗಳು, ಬಲವಾದ ರೆಕ್ಕೆಯ ಸ್ನಾಯುಗಳು ಉತ್ತಮ ಆಮ್ಲಜನಕ ಸೇವನೆ ಮತ್ತು ಪರಿಚಲನೆಗೆ ಅನುವು ಮಾಡಿಕೊಡುವಂತೆ ರೂಪುಗೊಂಡಿವೆ.

ವಲಸೆ ಹೋಗುವ ಸಮಯದಲ್ಲಿ ಹೆಬ್ಬಾತುಗಳು ದೀರ್ಘ ಸಮಯದ ಹಾರಾಟಕ್ಕೆ ಅಗತ್ಯವಾದ ಶಕ್ತಿಗಾಗಿ ದೇಹದಲ್ಲಿ ಸಂಗ್ರಹವಾಗಿರುವ ಕೊಬ್ಬನ್ನು ಬಳಸಿಕೊಳ್ಳುತ್ತವೆ. ಇವು ಸಸ್ಯಾಹಾರಿ ಪಕ್ಷಿಗಳು. ಹುಲ್ಲು, ಬೀಜಗಳು, ಜಲಸಸ್ಯಗಳು ಇವುಗಳ ಆಹಾರ.

ಬೇಸಿಗೆಯಲ್ಲಿ ಎತ್ತರ ಪ್ರದೇಶಗಳಲ್ಲಿನ ಸರೋವರ ಅಥವಾ ನದಿ ದಂಡೆಗಳಲ್ಲಿ, ಮಣ್ಣಿನ ಗೂಡುಗಳಲ್ಲಿ ಮೂರರಿಂದ ಆರು ಮೊಟ್ಟೆಗಳನ್ನಿಟ್ಟು, ಗಂಡು–ಹೆಣ್ಣು ಎರಡೂ ಕಾವು ಕೊಡುವ ಕೆಲಸದಲ್ಲಿ ನಿರತವಾಗುತ್ತವೆ. ಒಂದು ತಿಂಗಳ ನಂತರ ಹೊರಬರುವ ಮರಿಗಳು ಕೆಲವೇ ಗಂಟೆಗಳಲ್ಲಿ ನಡೆಯಲು ಮತ್ತು ಈಜಲು ಆರಂಭಿಸುತ್ತವೆ.

ಪಟ್ಟೆ ತಲೆ ಹೆಬ್ಬಾತು ನದಿಯ ದಡಗಳಲ್ಲಿ ಯೋಗಾಸನದ ಭಂಗಿಗಳಲ್ಲಿ ನಿಲ್ಲುವುದನ್ನು ನೋಡುವುದೇ ಒಂದು ಖುಷಿ.

